# ಅನಿಕೇತನ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ

BE BOUNDLESS

# ANIKETANA

BENGALURU CITY UNIVERSITY

ಸಂಪುಟ ೧ | ಆವೃತ್ತಿ ೧ | ಸಂಚಿಕೆ ೧ | ಬೆಂಗಳೂರು | ೧/೧೧/೨೦೨೫ | ಪುಟ ೧

Monthly Campus Journal by the Department of Mass Communication and Journalism. (For Private Circulation Only)


# ಬಾರಿಸು ಕನ್ನಡ ಡಿಂಡಿಮವ.......

ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾರಸ್ವತ ಲೋಕದ ಮೇರು ಸಾಹಿತಿ ರಾಷ್ಟ್ರಕವಿ ಕುವೆಂಪುರವರ ಈ ನುಡಿಮುತ್ತುಗಳು ಅಂದಿಗೂ ಇಂದಿಗೂ ಎಂದೆಂದಿಗೂ ಕನ್ನಡಿಗರಿಗೆ ಸ್ಫೂರ್ತಿಯ ಸೆಲೆಯಾಗಿವೆ. ಕುವೆಂಪುರವರ “ಜಯಭಾರತ ಜನನಿಯ ತನುಜಾತೆ....” ಗೀತೆ ನಾಡಗೀತೆಯಾಗಿ ಮೊಳಗುತ್ತಿದೆ. ವಿಶ್ವಮಾನವ ಸಂದೇಶ ಸಾರಿದ ಕುವೆಂಪುರವರ “ಓ ನನ್ನ ಚೇತನ ಆಗು ನೀ ಅನಿಕೇತನ...” ಗೀತೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಶಯ ಗೀತೆಯಾಗಿ ಅಂಗೀಕರಿಸಿ ಅಧಿಕೃತ ನಿರ್ಣಯ ಕೈಗೊಳ್ಳಲಾಗಿದೆ. ಇದೀಗ “ಅನಿಕೇತನ” ಶೀರ್ಷಿಕೆಯಡಿ 2025 ನವಂಬರ್ 1 ರಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಈ ಮಾಸ ಪತ್ರಿಕೆ ಆರಂಭಿಸಿದೆ. 1905ರಲ್ಲೇ ಸಾಹಿತಿ, ಪತ್ರಕರ್ತ ಹಾಗೂ ಇತಿಹಾಸಕಾರರೂ ಆದ ಕನ್ನಡದ ಕುಲಪುರೋಹಿತರೆಂದೇ ಪ್ರಖ್ಯಾತರಾದ ಆಲೂರು ವೆಂಕಟರಾಯರು ಕರ್ನಾಟಕ ಏಕೀಕರಣ ಚಳವಳಿಯ ಕಹಳೆ ಮೊಳಗಿಸಿ ಕನ್ನಡ ಭಾಷಿಕ ಪ್ರದೇಶಗಳನ್ನೆಲ್ಲಾ ಒಂದುಗೂಡಿಸುವ ಮಹೋನ್ನತ ಕನಸು ಕಂಡಿದ್ದರು. ಬ್ರಿಟಿಷರ ಆಳ್ವಿಕೆ ಕೊನೆಗೊಂಡು 1947ರಲ್ಲಿ ಸ್ವತಂತ್ರವಾದ ಭಾರತ 1950ರಲ್ಲಿ ನೂತನ ಸಂವಿಧಾನದಡಿಯಲ್ಲಿ ಗಣ–ರಾಜ್ಯವಾಗಿ ರೂಪುಗೊಂಡಿತು. ಅದಾದ ಬಳಿಕ ಭಾಷಾವಾರು ಪ್ರಾಂತ್ಯಗಳ ರಚನೆಗೆ ಪ್ರಬಲ ಒತ್ತಾಯ ಮುನ್ನೆಲೆಗೆ ಬಂದಿತು. ಇದರ ಪರಿಣಾಮವಾಗಿ 1956 ನವಂಬರ್ 1 ರಂದು ವಿಶಾಲ ಮೈಸೂರು ರಾಜ್ಯದ ಉದಯವಾಯಿತು. ಸಮಸ್ತ ಕನ್ನಡಿಗರ ಬಹುಕಾಲದ ಕನಸಾಗಿದ್ದ ಏಕೀಕರಣದ ಅಮೃತ ಘಳಿಗೆಯ ಅವಿಸ್ಮರಣೀಯ ಸಮಾರಂಭ ಸೆಂಟ್ರಲ್ ಕಾಲೇಜ್ ಮೈದಾನದಲ್ಲಿಯೇ ಜರುಗಿದ್ದು ಚರಿತ್ರಾರ್ಹ ದಾಖಲೆಯಾಗಿದೆ. ಅಂದಿನ ರಾಷ್ಟ್ರಪತಿ ಡಾ. ಬಾಬುರಾಜೇಂದ್ರ ಪ್ರಸಾದ್‌ರವರು ನೂತನ ಮೈಸೂರು ರಾಜ್ಯ ರಚನೆಯನ್ನು ವಿಧ್ಯುಕ್ತವಾಗಿ ಘೋಷಿಸಿದರು. ಮೈಸೂರು ಮಹಾರಾಜರಾಗಿದ್ದ ಜಯ ಚಾಮರಾಜ ಒಡೆಯರ್‌ರವರು ಪ್ರಥಮ ರಾಜ್ಯಪಾಲರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ನೇತೃತ್ವದ ನೂತನ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಿತು.


ಹಳೆಯ ಮೈಸೂರು ರಾಜ್ಯದ ಜೊತೆಗೆ ಈ ಹಿಂದಿನ ಮದ್ರಾಸ್ ಪ್ರೆಸಿಡೆನ್ಸಿ, ಬಾಂಬೆ ಪ್ರೆಸಿಡೆನ್ಸಿ ಮತ್ತು ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ಹೈದರಾಬಾದ್ ಪ್ರಾಂತ್ಯದ ಕನ್ನಡ ಭಾಷಿಕ ಪ್ರದೇಶಗಳು ಮತ್ತು ಕೊಡಗು ಪ್ರದೇಶವೂ ಒಳಗೊಂಡ ಹೊಸ ರಾಜ್ಯ ಸ್ಥಾಪನೆಯಾಯಿತು. 1973ರಲ್ಲಿ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ರಾಜ್ಯಕ್ಕೆ “ಕರ್ನಾಟಕ” ಎಂದು ಮರುನಾಮಕರಣ ಮಾಡಲಾಯಿತು. ನಾಡಿನಾದ್ಯಂತ ಪ್ರಸ್ತುತ 70ನೇ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಒಟ್ಟು 31 ಜಿಲ್ಲೆಗಳಿರುವ ಕರ್ನಾಟಕ ರಾಜ್ಯ ಜನಬಾಹುಳ್ಯದಲ್ಲಿ ದೇಶದಲ್ಲೇ ಎಂಟನೇ ಸ್ಥಾನದಲ್ಲಿದೆ. ಆರು ಕೋಟಿಗೂ ಅಧಿಕ ಜನಸಂಖ್ಯೆಯಿರುವ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವಮನ್ನಣೆಗೆ ಪಾತ್ರವಾಗಿದೆ. ಸುದೀರ್ಘ ಚರಿತ್ರೆಯುಳ್ಳ ಕನ್ನಡ ಭಾಷೆಗೆ ತಡವಾಗಿಯಾದರೂ ಕೆಲವರ್ಷಗಳ ಹಿಂದೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಲಭಿಸಿರುವುದು ಸಂತಸದ ಸಂಗತಿಯಾಗಿದೆ. ಕನ್ನಡ ಸಾರಸ್ವತಲೋಕ ಅತ್ಯುನ್ನತ ರಾಷ್ಟ್ರೀಯ ಮನ್ನಣೆಯಾದ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಯ ಗೌರವಕ್ಕೆ ಒಟ್ಟು ಎಂಟು ಬಾರಿ ಪಾತ್ರವಾಗಿದ್ದು ಕರ್ನಾಟಕ ರಾಜ್ಯ ದೇಶದಲ್ಲೇ ಅಗ್ರಸ್ಥಾನದಲ್ಲಿದೆ.

## ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ

ನಾಡಿನ ಉದ್ದಗಲಕ್ಕೂ ಕನ್ನಡದ ಜ್ಯೋತಿಯನ್ನು ಬೆಳಗಿಸಿದ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ 1918 ಆಗಸ್ಟ್‌ನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಯವರ ಮಾರ್ಗದರ್ಶಕತ್ವದಲ್ಲಿ ಪ್ರಾರಂಭವಾಯಿತು. ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಬಿ. ವೆಂಕಟನಾರಾಯಣಪ್ಪ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ (1918–1930) ಸಾರಥ್ಯ ವಹಿಸಿದರು. ಪ್ರಿನ್ಸಿಪಾಲರಾದ ಜೆ.ಜಿ. ಟೈಟ್ ಮತ್ತು ಇ.ಪಿ. ಮೆಟ್ಕಾಫ್ ಕನ್ನಡ ಸಂಘದ ರಚನೆಗೆ ಸಂಪೂರ್ಣ ಬೆಂಬಲವಿತ್ತರು.

ಕರ್ನಾಟಕ ಸಂಘದ ತ್ರೈಮಾಸಿಕ ಪತ್ರಿಕೆ ‘ಪ್ರಬುದ್ಧ ಕರ್ನಾಟಕ’ ಎ.ಆರ್. ಕೃಷ್ಣಶಾಸ್ತ್ರಿಯವರ ನೇತೃತ್ವದಲ್ಲಿ 1919ರಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಅವರು ಮೈಸೂ–ರಿನ ಓರಿಯೆಂಟಲ್ ಲೈಬ್ರರಿಗೆ ವರ್ಗಾವಣೆಯಾದ ಪ್ರಯುಕ್ತ ಟಿ.ಎಸ್. ವೆಂಕಣ್ಣಯ್ಯ ಮುನ್ನಡೆಸಿದರು. 1932ರಿಂದ ಮೈಸೂರು ವಿಶ್ವವಿದ್ಯಾಲಯವೇ ಪತ್ರಿಕೆಯ ಪ್ರಕಟಣೆ ಕೈಗೆತ್ತಿಕೊಂಡ ಮೇಲೆ ಎ.ಆರ್. ಕೃಷ್ಣಶಾಸ್ತ್ರಿಯವರು ಸಂಪಾದಕರಾದರು.

1930ರಿಂದ 1943ವರೆಗೆ ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ಕರ್ನಾಟಕ ಸಂಘದ ಅಧ್ಯಕ್ಷರಾಗಿ



ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯ


ಪ್ರಬುದ್ಧ ಕರ್ಣಾಟಕ ಪತ್ರಿಕೆ

ಕಾರ್ಯನಿರ್ವಹಿಸಿದರು. ಇದೇ ಅವಧಿಯಲ್ಲಿ ಸಂಘದ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚ–ರಿಸಲಾಯಿತು. ಕರ್ನಾಟಕ ಸಂಘ ಸ್ಥಾಪನೆಯಾಗಿ ನೂರು ವಸಂತಗಳು ದಾಟಿದ್ದು ಇದೀಗ ಶತಮಾನೋತ್ಸವ ಸಂಭ್ರಮವನ್ನು ಆಚರಿಸಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸಜ್ಜಾಗುತ್ತಿದೆ.

### ಜ್ಞಾನಪೀಠ ಪುರಸ್ಕೃತರು



ಕುವೆಂಪು
ಶ್ರೀ ರಾಮಾಯಣ ದರ್ಶನಂ(೧೯೬೭)


ದ. ರಾ. ಬೇಂದ್ರೆ
ನಾಕುತಂತಿ (೧೯೭೨)



ಶಿವರಾಮ ಕಾರಂತ
ಮೂಕಜ್ಜಿಯ ಕನಸುಗಳು(೧೯೭೭)


ಮಾಸ್ತಿ ವೆಂಕಟೇಶ ಅಯ್ಯಂಗಾರ್
ಚಿಕವೀರ ರಾಜೇಂದ್ರ(೧೯೮೩)


ವಿ. ಕೃ. ಗೋಕಾಕ
ಭಾರತ ಸಿಂಧು ರಶ್ಮಿ(೧೯೯೦)


ಯು. ಆರ್. ಅನಂತಮೂರ್ತಿ
ಸಮಗ್ರ ಸಾಹಿತ್ಯ(೧೯೯೪)


ಗಿರೀಶ್ ಕಾರ್ನಾಡ್
ಸಮಗ್ರ ಸಾಹಿತ್ಯ(೧೯೯೮)


ಚಂದ್ರಶೇಖರ ಕಂಬಾರ
ಸಮಗ್ರ ಸಾಹಿತ್ಯ(೨೦೧೦)

## ವಿದ್ಯಾರ್ಥಿ–ಉಪನ್ಯಾಸಕರಿಗೆ ‘ಅನಿಕೇತನ ದೃಷ್ಟಿಕೋನ’ ಕಾರ್ಯಕ್ರಮ

ಬೆಂಗಳೂರು ನಗರ ವಿಶ್ವ ವಿದ್ಯಾನಿಲಯದ ನೂತನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ‘ಅನಿಕೇತನ–ದೃಷ್ಟಿಕೋನ’ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಪ್ರಾಸ್ತಾವಿಕವಾಗಿ ಮಾತನಾಡಿದ ಆಂತರಿಕ ಗುಣಮಟ್ಟ ಖಾತರಿ ಘಟಕದ ನಿರ್ದೇಶಕರಾದ ಪ್ರೊ. ವಿ.ಆರ್. ದೇವರಾಜ್ ವಿಶ್ವವಿದ್ಯಾನಿಲಯದ ಧ್ಯೇಯವಾಕ್ಯವಾದ ರಾಷ್ಟ್ರಕವಿ ಕುವೆಂಪುರವರ "ಆಗು ನೀ ಅನಿಕೇತನ"ದ ಆಶಯದನ್ವಯ ಉನ್ನತ ಶಿಕ್ಷಣದ ಗುರಿ ಸಾಧನೆಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ಒದಗಿಸುವ ಭರವಸೆ ನೀಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರು ಮತ್ತು ಲೇಖಕರಾದ ಪ್ರೊ. ಜಿ. ಪ್ರಶಾಂತ್ ನಾಯಕ್ ಮಾತನಾಡಿ, ವಿದ್ಯಾರ್ಥಿಗಳು ಶೈಕ್ಷಣಿಕ ಗುರಿಸಾಧನೆಯ



ಕುಲಪತಿಗಳಾದ ಪ್ರೊ.ರಮೇಶ್.ಬಿ, ಕುಲಸಚಿವರಾದ ನವೀನ್ ಜೋಸೆಫ್, ವಿತ್ತಾಧಿಕಾರಿ ವಿಜಯಲಕ್ಷ್ಮಿ, ಪ್ರೊ. ವಿ.ಆರ್. ದೇವರಾಜ್, ಸಮಾಜ ಕಲ್ಯಾಣ ಅಧಿಕಾರಿ ಪುರುಷೋತ್ತಮರವರು ಭಾಗವಹಿಸಿದ್ದರು

ಜೊತೆಗೆ ಸಾಮಾಜಿ–ಕ ಪ್ರಜ್ಞೆಯನ್ನು ರೂಪಿಸಿಕೊಳ್ಳುವ ಸಲಹೆ ನೀಡಿದರು. ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ತಲ್ಲಣಗಳ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಜಾತಿ ಮತದ ಸಂಕುಚಿತ ಎಲ್ಲೆಗಳನ್ನು ಮೀರಿ ಕುವೆಂಪುರವರ ವಿಶ್ವಮಾನವ ಸಂದೇಶದ ಉದಾತ್ತ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಪುಸ್ತಕಗಳನ್ನು ಓದುವ ಮತ್ತು ಮನನ ಮಾಡಿಕೊಳ್ಳುವ ಅಭ್ಯಾಸವನ್ನು ಬೆಳೆಸಿಕೊಂಡು ವ್ಯಕ್ತಿತ್ವ ವಿಕಾಸದ ಮೂಲಕ ಜೀವನದ ಗುರಿ ಮತ್ತು ಕನಸುಗಳನ್ನು ನನಸಾಗಿಸಲು ನಿರಂತರ ಪರಿಶ್ರಮ ನಡೆಸುವಂತೆ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಸಿಯು ಕುಲಪತಿಗಳಾದ ಪ್ರೊ. ಬಿ.ರಮೇಶ್, ಜ್ಞಾನ, ಕೌಶಲ್ಯ ಮತ್ತು ಉದ್ಯೋಗ ನೇಮಕ ಅವಕಾಶ ಒದಗಿಸುವ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿ–ಕೆಗಳಿಗೆ ಸಕಲ ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಉಚಿತ ತರಬೇತಿ ಒದಗಿಸುವ ಮತ್ತು ಪ್ರತಿ ವರ್ಷ ಉದ್ಯೋಗ ಮೇಳ ಆಯೋಜಿಸುವ ಯೋಜನೆಗಳನ್ನು ಅವರು ಪ್ರಕಟಿಸಿದರು.

ಕುಲಸಚಿವರಾದ ನವೀನ್ ಜೋಸೆಫ್, ಅಂದಿನ ಕುಲಸಚಿವರಾದ (ಮೌಲ್ಯಮಾಪನ) ಪ್ರೊ. ಕೆ.ಆರ್. ಜಲಜಾ, ವಿತ್ತಾಧಿಕಾ–ರಿಗಳಾದ ಎಂ.ವಿ. ವಿಜಯಲಕ್ಷ್ಮಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಪುರುಷೋತ್ತಮ, ಎಡುಫ್ಯಾಕ್ಟರಿ ಸಂಸ್ಥೆಯ ನವೀನ್ ಸೇನ್ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳಾದ ಮಹಮ್ಮದ್ ರಫಿ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು. ಎಂ.ಇ.ಎಸ್. ಶಿಕ್ಷಕರ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಎಚ್.ಎಸ್. ಗಣೇಶ ಭಟ್ಟ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ.. ಎಸ್. ಆರ್. ಕೇಶವ ಬೋಧನಾ ವಿಧಾನ ಮತ್ತು ಕೌಶಲ್ಯದ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ವಾಣಿಜ್ಯ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ ಸುಮನ್ ಮಾಲಿ ಕಾರ್ಯಕ್ರಮ ನಿರೂಪಿಸಿದರು.

# ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಆದ್ಯತೆ – ನೂತನ ಕುಲಪತಿ ಭರವಸೆ



ಪ್ರಭಾರ ಕುಲಪತಿ ಪ್ರೊ. ಕೆ.ಆರ್. ಜಲಜಾ, ಪ್ರೊ. ರಮೇಶ್ ಬಿ.ರವರಿಗೆ ಅಧಿಕಾರ ಹಸ್ತಾಂತರಿಸಿದರು

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾಗಿ ಪ್ರೊ. ರಮೇಶ್ ಬಿ. 2025 ಸೆಪ್ಟೆಂಬರ್ 8 ರಂದು ಅಧಿಕಾರ ಸ್ವೀಕರಿಸಿದರು. ಘನತೆವೆತ್ತ ಗೌರವಾನ್ವಿತ ರಾಜ್ಯಪಾಲರ ಅಧಿಕೃತ ಆದೇಶದ ಮೇರೆಗೆ ಪ್ರಭಾರ ಕುಲಪತಿಗಳಾದ ಪ್ರೊ. ಕೆ.ಆರ್. ಜಲಜಾರವರು, ಪ್ರೊ. ರಮೇಶ್ ಬಿ.ರವರಿಗೆ ವಿಧ್ಯುಕ್ತವಾಗಿ ಅಧಿಕಾರ ಹಸ್ತಾಂತರಿಸಿದರು. ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಬಿ. ರಮೇಶ್ ರವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವರಾಗಿ ಎರಡನೇ ಅವಧಿಗೆ ಸೇವೆ ಸಲ್ಲಿಸುತ್ತಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಬಿಸಿಯು ಕುಲಸಚಿವರಾದ ಎ. ನವೀನ್ ಜೋಸೆಫ್, ವಿತ್ತಾಧಿಕಾ-ರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರು, ಡೀನರು, ವಿಭಾಗ ಮುಖ್ಯಸ್ಥರು, ಹಿರಿಯ ಪ್ರಾಧ್ಯಾಪಕರು ಹಾಗೂ ಇತರೆ ಸಿಬ್ಬಂದಿ ಹಾಜ-ರಿದ್ದು ಶುಭ ಕೋರಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಕ್ಯಾಂಪಸ್ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಸಕಲ ಕ್ರಮಗಳನ್ನು ಕೈಗೊಳ್ಳುವುದಾಗಿ ನೂತನ ಕುಲಪತಿಗಳಾದ ಪ್ರೊ. ರಮೇಶ್.ಬಿ. ಭರವಸೆಯಿತ್ತರು. ಸರ್ ಸಿ.ವಿ. ರಾಮನ್ ಹಾಲ್ ನಲ್ಲಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು ಬಿಸಿಯು ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ಮತ್ತು ನೇಮಕಾತಿ ಹಾಗೂ ಸ್ವಯಂ ವೃತ್ತಿ ಅವಕಾಶಗಳ ಸೃಷ್ಟಿಗೆ ಉದ್ಯಮ ವಲಯದ ಸಹಯೋಗದಲ್ಲಿ ವಿಸ್ತೃತ ಕಾರ್ಯಕ್ರಮ ರೂಪಿಸುವುದಾಗಿ ಅವರು ಪ್ರಕಟಿಸಿದರು. ಸಾಮಾಜಿಕ ನ್ಯಾಯ ತತ್ವಕ್ಕೆ ಅನುಗುಣವಾಗಿ ಮಹಿಳೆಯರು ಮತ್ತು ಬಡವರ ಹಾಗೂ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಗೆ ವಿಶೇಷ ಗಮನ ನೀಡಲಾಗುವುದೆಂದು ಅವರು ಇದೇ ಸಂದರ್ಭದಲ್ಲಿ ಖಚಿತಪಡಿಸಿದರು.

ಬಿಸಿಯು ಪ್ರಭಾರ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ ಪ್ರೊ. ಕೆ. ಆರ್. ಜಲಜಾರವರಿಗೆ ಕೃತಜ್ಞತೆ ಅರ್ಪಿಸಲಾಯಿತು.



ವಿಶ್ವವಿದ್ಯಾನಿಲಯದ ಬೋಧಕ – ಬೋಧಕೇತರ ಸಿಬ್ಬಂದಿ ವರ್ಗದ ವತಿಯಿಂದ ನೂತನ ಕುಲಪತಿಗೆ ಅಭಿನಂದನೆ

ಕುಲಸಚಿವರಾದ ನವೀನ್ ಜೋಸೆಫ್ ಉಭಯತ್ರರನ್ನು ಸನ್ಮಾನಿಸಿ ಗೌರವಿಸಿದರು. ಹಿರಿಯ ಪ್ರಾಧ್ಯಾಪಕರಾದ ಪ್ರೊ. ವಿ. ಆರ್. ದೇವರಾಜ್ ಹಾಗೂ ಪ್ರೊ. ಪಿ.ಆರ್. ಚೇತನಾ ಅಭಿನಂದನಾ ನುಡಿಗಳನ್ನಾಡಿದರು.

ಬಿಸಿಯು ಸಿಂಡಿಕೇಟ್ ಸದಸ್ಯರಾದ ಪ್ರೊ. ಬಿ.ಆರ್. ಸುಪ್ರೀತ್ ಮತ್ತು ಡಾ. ಆಯಿಷಾ ಫರ್ಜಾನಾ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಸಂಯೋಜ-ಕರಾದ ಡಾ.ಗೋವಿಂದೇಗೌಡ ವಂದಿಸಿದರು. ಇತಿಹಾಸ ವಿಭಾಗದ ಡಾ. ಎಂ. ಮಾಲಿನಿ ಕಾರ್ಯಕ್ರಮ ನಿರೂಪಿಸಿದರು.

## ವಿವಿ ಮಹಿಳಾ ಕಾಲೇಜಿನಲ್ಲಿ ನೂತನ ವಿದ್ಯಾರ್ಥಿನಿಯರಿಗೆ ಸ್ವಾಗತ

ಮಲ್ಲೇಶ್ವರದಲ್ಲಿರುವ ಬಿಸಿಯು ಮಹಿಳಾ ಘಟಕ ಕಾಲೇಜಿನಲ್ಲಿ ೨೦೨೫-೨೬ನೇ ಸಾಲಿನ ಹೊಸ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭ ಯಶಸ್ವಿಯಾಗಿ ನೆರವೇರಿತು. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್ .ಬಿ. ಹಾಗೂ ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕಿ ಮತ್ತು ಮಹಿಳಾ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ. ಜ್ಯೋತಿ ವೆಂಕಟೇಶ್ ದೀಪ ಬೆಳಗುವ ಮೂಲಕ ನೂತನ ಶೈಕ್ಷಣಿಕ ವರ್ಷದ ಚಟುವಟಿ-ಕೆಗಳಿಗೆ ಚಾಲನೆ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ.ರಮೇಶ್.ಬಿ., ವಿದ್ಯಾರ್ಥಿನಿಯರು ತಮ್ಮ ಆಸಕ್ತಿಯ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಉನ್ನತ ಶಿಕ್ಷಣದಲ್ಲಿ ಉತ್ತಮ ಸಾಧನೆ ಪ್ರದರ್ಶಿಸಬೇಕೆಂದು ಸಲಹೆ ನೀಡಿದರು ಮಹಿಳೆಯರು ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸುವ ಮೂಲಕ ಸ್ತ್ರೀ ಸಬಲೀಕರಣದ ಗುರಿ ತಲುಪಿದಾಗ ಮಾತ್ರ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಅರ್ಥಪೂರ್ಣವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಸಂಪೂರ್ಣ ಸಕ್ರಿಯ ಭಾಗವಹಿಸುವಿಕೆ ಸಾಧ್ಯವಾದಾಗ ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಹೊಸ ವೇಗ ಲಭಿಸುವಿದೆಂದು ಅವರು ಪ್ರತಿಪಾದಿಸಿದರು. ರೋಟರಿ ನಿರ್ದೇಶಕರಾದ ಡಾ.ರಾಜೇಶ್ ಮಾತನಾಡಿ ಸಮುದಾಯದ ಅಭಿವೃದ್ಧಿ ಚಟುವಟಿಕೆ ಮತ್ತು ಸೇವೆಯನ್ನು ಸಮಗ್ರ ಶಿಕ್ಷಣದ ಭಾಗವಾಗಿ ಅಳವಡಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಾಗತಿಕ ಭಾಷೆಗಳ ಕೇಂದ್ರದ ಸಂಸ್ಥಾಪಕ ಅಧ್ಯಕ್ಷರಾದ ಡಾ. ಸುಮನ್ ವೆಂಕಟೇಶ್ ಮಾತನಾಡಿ ತಮ್ಮ ಅಭಿರುಚಿಗೆ ತಕ್ಕ ವೃತ್ತಿ ಜೀವನ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ತ ಪೂರ್ವಸಿದ್ಧತೆ ಮಾಡುವಂತೆ ಕಿವಿಮಾತು ಹೇಳಿದರು. ಸಮಾರಂಭದ ಅಂತ್ಯದಲ್ಲಿ ಉತ್ತಮ ಶೈಕ್ಷಣಿಕ ಸಾಧನೆಗೈದ ಹಾಗೂ ಪಠ್ಯೇತರ ಚಟುವಟಿ-ಕೆಗಳು ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವ-ರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು ವಿದ್ಯಾರ್ಥಿನಿಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದರು.




ಮಲ್ಲೇಶ್ವರಂ ವಿಶ್ವವಿದ್ಯಾಲಯ ಮಹಿಳಾ ಕಾಲೇಜಿನಲ್ಲಿ ಜ್ಯೋತಿ ಬೆಳಗಿ ಕಾರ್ಯಕ್ರಮ ಉದ್ಘಾಟಿಸಿದ ಗಣ್ಯರು

## ಭಾವೈಕ್ಯತೆ ಸಂರಕ್ಷಣೆ–ಕುಲಪತಿ ಪ್ರೇರಣೆ

ಬಹುತ್ವ ಭಾರತದಲ್ಲಿ ಸಾಮಾಜಿಕ ಸಾಮರಸ್ಯ ಕಾಪಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಕ್ರಿಯ ಪಾತ್ರ ವಹಿಸಬೇಕೆಂದು ಬಿಸಿಯು ಕುಲಪತಿಗಳಾದ ಪ್ರೊ.ಬಿ.ರಮೇಶ್ ಪ್ರತಿಪಾದಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ಎನ್‌ಎಸ್-ಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅನೇಕ ಜಾತಿ, ಧರ್ಮ, ಭಾಷೆ ಹಾಗೂ ಆಚಾರ-ವಿಚಾರಗಳ ಆಗರವಾಗಿರುವ ನಮ್ಮ ಸಮಾಜದಲ್ಲಿ ಸಮುದಾಯ ಸಹಬಾಳ್ವೆಗೆ ಉಂಟಾಗಿರುವ ತೊಡಕುಗಳನ್ನು ನಿವಾರಿಸಿ ಒಗ್ಗಟ್ಟಿನ ಭಾವನೆ ಮೂಡಿಸುವ ಪ್ರಯತ್ನ ನಿರಂತರವಾಗಿ ನಡೆಯಬೇಕೆಂದು ಅವರು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಸೇವಾ ಮನೋಭಾವ, ಶಿಸ್ತಿನ ಜೀವನ ಕ್ರಮ, ಸಾಮಾಜಿ-ಕ ಜವಾಬ್ದಾರಿ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವಂತೆ ಅವರು ವಿದ್ಯಾರ್ಥಿಗಳಿಗೆ ಸಲಹೆಯಿತ್ತರು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಸಿಯು ಕುಲಸಚಿವರಾದ ಎ. ನವೀನ್ ಜೋಸೆಫ್ ರವರು ಗ್ರಾಮೀಣ ವಿದ್ಯಾರ್ಥಿಗಳು ಕೀಳರಿಮೆಯ ಭಾವನೆಯನ್ನು ತೊಡೆದುಹಾಕಿ ವ್ಯಕ್ತಿತ್ವ ವಿಕಾಸದ ಮೂಲಕ ಸಮಾಜದ ಮುಖ್ಯವಾಹಿನಿಯ ಮುಂಚೂಣಿಗೆ ಬರಬೇಕೆಂದು ಉತ್ತೇಜಿಸಿದರು.

ವಿದ್ಯಾರ್ಥಿಗಳು ಶೈಕ್ಷಣಿಕ ಗು-ರಿಸಾಧನೆಯ ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲಿ ಕ್ರಿಯಾಶೀಲವಾಗಿ ತೊಡಗುವ ಮೂಲಕ ರಾಷ್ಟ್ರನಿರ್ಮಾಣದ ಗು-ರಿಯತ್ತ ಸಾಗುವ ಆದರ್ಶವನ್ನು ರೂಢಿಸಿಕೊಳ್ಳಬೇಕೆಂದು ಅವರು ಮಾರ್ಗದರ್ಶನವಿತ್ತರು.

ಬಿಸಿಯು ಎನ್‌ಎಸ್-ಎಸ್ ಘಟಕದ ಸಂಯೋಜ-ಕರಾದ ಡಾ.ಗೋವಿಂದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ ವಿವಿಧ ಕಾರ್ಯಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಸಮನ್ವಯಾಧಿಕಾರಿ ಡಾ. ಬಿ.ಜಿ. ಶಿವಕುಮಾರ್ ವಂದಿಸಿದರು. ವಿವಿಧ ವಿಭಾಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತ-ರಿದ್ದರು




ಎನ್‌ಎಸ್‌ಎಸ್ ಸ್ವಯಂಸೇವಕರೊಂದಿಗೆ ಕುಲಪತಿ ಪ್ರೊ ರಮೇಶ್ ಬಿ, ಕುಲಸಚಿವರಾದ ನವೀನ್ ಜೋಸೆಫ್ ಮತ್ತು ಸಂಯೋಜಕ ಡಾ. ಗೋವಿಂದೇಗೌಡ

## ಪ್ರೊ. ಜ್ಯೋತಿ ವೆಂಕಟೇಶ್‌ರವರಿಗೆ ಫ್ರಾನ್ಸ್ ಸರ್ಕಾರದ ಚೆವಲಿಯರ್ ಪ್ರಶಸ್ತಿ

ಬೆಂಗಳೂರು ನಗರ ವಿಶ್ವ ವಿದ್ಯಾನಿಲಯದ ಜಾಗತಿಕ ಭಾಷೆಗಳ ಕೇಂದ್ರದ ವತಿಯಿಂದ ಏರ್ಪಡಿಸಲಾಗಿದ್ದ ವಿಚಾರಸಂಕಿರಣ ಮತ್ತು ಸಾಹಿತ್ಯೋತ್ಸವದಲ್ಲಿ ಡಾ. ಸುಮನ್ ವೆಂಕಟೇಶ್ ರವರ **"ವಿಕ್ಟರ್ ಹ್ಯೂಗೋ ಮತ್ತು ಹಿಂದೂ ತತ್ವಶಾಸ್ತ್ರ"** ಪುಸ್ತಕ ಬಿಡುಗಡೆ ನೆರವೇರಿತು. ಇದೇ ಸಂದರ್ಭದಲ್ಲಿ ಜಾಗತಿಕ ಭಾಷೆಗಳ ಕೇಂದ್ರದ ಅಧ್ಯಕ್ಷರಾದ ಪ್ರೊ. ಜ್ಯೋತಿ ವೆಂಕಟೇಶ್‌ರವ-ರಿಗೆ ಫ್ರೆಂಚ್ ಭಾಷೆ ಮತ್ತು ಸಂಸ್ಕೃತಿಯ ಪ್ರಸಾರಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಫ್ರಾನ್ಸ್ ಕನ್ಸುಲ್ ಜನರಲ್ ಮಾರ್ಕ್ ಲಾಮಿಯವರು ಫ್ರಾನ್ಸ್ ಸರ್ಕಾರದ ಪ್ರತಿಷ್ಠಿತ ಚೆವಲಿಯರ್ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿದ್ದ ಪ್ರೊ. ಕೆ.ಆರ್. ಜಲಜಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣ ಭಾರತದ ಫ್ರೆಂಚ್ ಭಾಷಾ ಸಹಕಾರ ಕೇಂದ್ರದ ಪ್ರತಿನಿಧಿ ಥಾಮಸ್ ಚೌಮಾಂಟ್, ಬೆಂಗಳೂರಿನ ಅಲಿಯನ್ಸ್ ಫ್ರಾಂಚೈಸ್ ನಿರ್ದೇಶಕರಾದ ಜೀನ್ ಮಾರ್ಕ್ ಡೆಪೀರಿ, ಬೆಂಗಳೂರು ವೈಜ್ಞಾನಿಕ ಮತ್ತು ಶೈಕ್ಷಣಿಕ ಸಹಕಾರ ಕೇಂದ್ರದ ಆಂತೋನಿ ಗುಯಿಲೆಮೆಟ್ ಹಾಗೂ ಬಿಸಿಯು ಸಿಂಡಿಕೇಟ್ ಸದಸ್ಯರಾದ ಫಾದರ್ ಫ್ರಾನ್ಸಿಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಫ್ರಾನ್ಸ್ ಕನ್ಸುಲ್ ಜನರಲ್ ಅವರಿಂದ ಪ್ರೊ ಜ್ಯೋತಿ ವೆಂಕಟೇಶ್‌ರವರಿಗೆ ಪ್ರಶಸ್ತಿ

# “ಆಗು ನೀ ಸಮಾಜಕಾರ್ಯ ಚೇತನ”
# MSW Students’ Orientation Programme

**-Vinutha S (2nd MSW)**

The Department of Social Work, Bengaluru City University, organized a One-Day Student Orientation Programme on 18th October 2025 at the Seminar Hall, Jnanajyothi Auditorium. Dr. Venkatesh Murthy, delivered the Introductory Note of the programme. He elaborated on the theme “ಅನಿಕೇತನ : ಆಗು ನೀ ಸಮಾಜಕಾರ್ಯ ಚೇತನ”, explaining the objectives of the orientation. The Inaugural Address was delivered by Prof. Ramesh B, Hon’ble Vice Chancellor of Bengaluru City University, who is also an alumnus of the Department of Social Work. He motivated everyone to make the most of their academic journey and to build meaningful careers rooted in compassion and service to society. He mentioned the introduction of skill development courses and training


Dignitaries inauguraing MSW Student’s Orientation Programme

specifically designed for MSW students to enhance their practical competencies and professional growth. Prof. Ritika Sinha, Chairperson of the Department of Social Work, delivered the Presidential Address. She appreciated the efforts of all faculty members and students for organizing the event successfully and shared her vision for the department. The second half of the programme consisted of three technical sessions conducted by the resource persons.

*Session I: “Empowering Communities: The Role of Social Workers in Social Development”* Speaker: Dr. Mallikarjun, Director, Association of People with Disability

*Session II: “Recent Trends in HRM: Integrating Social Work Principles in HR Practices”* Speaker: Dr. Kempegowda B.K, Head – HR, GE Healthcare, South India

*Session III: “Foundations of Psychiatric Social Work Practice: Understanding Psychiatric and Interdisciplinary Roles”* Speaker: Dr. Dhanashekera Pandian, Professor and Former HOD, Psychiatric Social Work, NIMHANS.

## CGL -Annual Orientation “Aarambha”

**-Shravya Mouli(CGL)**

Bengaluru, October 18, 2025 – The Centre for Global Languages at Bengaluru City University organized "Aarambha," its annual orientation for students enrolled in various courses offered by the university. The event was presided over by Prof. Ramesh B, Hon'ble Vice-Chancellor of Bengaluru City University, who addressed the new batch at the Academic Block Auditorium. In his address, Prof. Ramesh emphasized the critical need and unique niche created by foreign language proficiency in today's globalized world, highlighting the vast opportunities it opens for students across various professional domains. He promised his support towards a more state of the art infrastructure for the centre and foresaw an enrollment of 600 and above students in the next academic year. Dr. Jyothi Venkatesh, Dean of the Faculty of Arts, along with the Director of the Centre for Global Languages, extended warm greetings to the students. They spoke enthusiastically about future career prospects and diverse pathways available to multilingual professionals in international business, diplomacy, translation, and cultural exchange. The event marked an inspiring beginning for aspiring linguists embarking on their language-learning journey.

### BCU GETS NEW REGISTRAR OF EVALUATION


Prof. Ramesh B Kudenatti, Senior Professor, takes charge as Registrar - Evaluation from Prof. K R Jalaja on 28th Oct.

## Gandhi Jayanthi Celebration

The Mahatma Gandhi Study Centre of Bengaluru City University organized Gandhi Jayanthi celebrations on 2nd October at Rajaji Hall. Prof. Ramesh.B. Vice-Chancellor of Bengaluru City University, addressed the gathering and emphasized that truth and ahimsa must become integral to everyday life. He observed that true equality in society can be achieved by following the principles of Sarvodaya. Fr. Francis Almeida, Syndicate Member, remarked that Gandhiji’s ideas remain deeply relevant to today’s youth and are essential in eradicating discrimination based on caste, religion, and gender. Smt. Vani Aradhya, Department of Social Work, Dr. Aktar from Department of Kannada, also spoke on the occassion. Syndicate Member Shivakumar, Registrar (Administration) Naveen Joseph A., the then Registrar (Evaluation) Prof. K.R. Jalaja, attended the function. Prof Jyothi Venkatesh,Director of the Mahatma Gandhi Study Centre extended gratitude to the housekeeping staff of BCU.

-Dr. M Malini


Gandhi Jayanti Celebration at Rajaji Hall, Central College Premises, BCU.

# BCU MCJ Dept. Organises Studio Tour

**Bengaluru:** The Department of Mass Communication and Journalism at Bangalore City University organised studio visits to provide hands-on media production experience for journalism students from Vijaya College, Jayanagar, and Baldwin Methodist Women’s College, Richmond Town, Bengaluru.


Students of Baldwin College with Dr. T.N.Thandava Gowda

On October 10, students from Baldwin Methodist Women’s College visited the department and gained exposure to the functioning of audio and video studios. A similar visit was organised on October 17 for the final year B.A. students of Vijaya College, Jayanagar.

Under the Supervision of Dr D.S. Praveena, faculty of MCJ, students learned audio editing using Audacity and practised creating radio content, such as PSAs and RJ scripts. In the television section, students participated in news reporting and anchoring exercises and learned techniques related to camera operation, lighting, and teleprompter reading.

Student Anbu Selvi from Vijaya College said, “The concept of lighting was explained very clearly by the faculty, and I quickly understood the importance of lighting.” MCJ Department Chairman, Dr T.N. Thandava Gowda, and other faculty members, along with the department technician, were present and offered their support throughout the sessions. The visits provided students with valuable professional exposure and strengthened their confidence in pursuing careers in journalism and Mass Communication.


Students of Vijaya College at BCU News Studio with Dr. Praveena

## ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ರಾಷ್ಟ್ರೀಯ ವಿಪತ್ತು ದಿನಾಚರಣೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಯುವ ರೆಡ್ ಕ್ರಾಸ್ ಸೆಲ್ ಮತ್ತು ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಬೆಂಗಳೂರು ಶಾಖೆ ಸಂಯುಕ್ತವಾಗಿ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ಪಡೆ (NDRF) ದಿನವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಆಚರಿಸಲಾಯಿತು. ಕುಲಪತಿಗಳಾದ ಪ್ರೊ. ಬಿ. ರಮೇಶ್ ಕಾರ್ಯಕ್ರಮ ಉದ್ಘಾಟಿಸಿದರು. NDRF ಸಂಸ್ಥೆಯ ಮಹತ್ವ ಮತ್ತು ದೇಶದ ಭದ್ರತೆ ಹಾಗೂ ವಿಪತ್ತು ನಿರ್ವಹಣೆಯಲ್ಲಿ ಅದರ ಪ್ರಮುಖ ಪಾತ್ರವನ್ನು ಅವರು ಉಲ್ಲೇಖಿಸಿದರು.

“NDRF ಧೈರ್ಯ ಮತ್ತು ಸಜ್ಜುಗೊಳ್ಳುವಿಕೆಯ ಸಂಕೇತವಾಗಿದೆ. ಪ್ರತಿಯೊಬ್ಬ ನಾಗರಿಕರು, ವಿಶೇಷವಾಗಿ ಯುವಕರು, ವಿಪತ್ತು ನಿರ್ವಹಣೆಯ ಬಗ್ಗೆ ಅರಿವು ಹೊಂದಿ, ಸಮುದಾಯದ ಸ್ಥೈರ್ಯವನ್ನು ಹೆಚ್ಚಿಸಲು ಸಕ್ರಿಯ ಪಾತ್ರವಹಿಸಬೇಕು” ಎಂದು ಪ್ರೊ. ಬಿ. ರಮೇಶ್ ಸೂಚಿಸಿದರು. ಭಾರತೀಯ ರೆಡ್ ಕ್ರಾಸ್ ಸೊಸೈಟಿ ಬೆಂಗಳೂರು ಶಾಖೆಯ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿ, ದೇಶದಾದ್ಯಂತ ರೆಡ್ ಕ್ರಾಸ್ ಸೊಸೈಟಿಯು ವಿಪತ್ತು ನಿರ್ವಹಣೆ, ಪರಿಹಾರ ಕಾರ್ಯಗಳು ಮತ್ತು ಮಾನವೀಯ ಸಹಾಯದಲ್ಲಿ ವಹಿಸಿರುವ ಪ್ರಮುಖ ಪಾತ್ರವನ್ನು ವಿವರಿಸಿದರು. NDRF ಉಪ ಕಮಾಂಡಂಟ್ ಅಖಿಲೇಶ್ ಕುಮಾರ್ ಚೌಬೆ ಅವರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿಪತ್ತು ಸಿದ್ಧತೆ, ಪ್ರತಿಕ್ರಿಯಾ ತಂತ್ರಗಳು ಮತ್ತು ಸಮುದಾಯದ ಸ್ವಯಂಸೇವಕರ ಪಾತ್ರದ ಕುರಿತು ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮವನ್ನು ನಡೆಸಿದರು.

ಕುಲಸಚಿವರಾದ ನವೀನ್ ಜೋಸೆಫ್, ಯುವ ರೆಡ್ ಕ್ರಾಸ್ ಸೆಲ್(ಬಿಸಿಯು) ನ ನೊಡಲ್ ಅಧಿಕಾರಿ ಡಾ. ಗೋವಿಂದೇಗೌಡ, ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಕಾರ್ಯದರ್ಶಿ ರಾಜೇಶ್,ಭಾಗವಹಿಸಿದ್ದರು.

# ಪಾಲಿ – ಕನ್ನಡ ಶಬ್ದಕೋಶದ ನಾಲ್ಕನೇ ಸಂಪುಟ ಬಿಡುಗಡೆ

ಬೌದ್ಧ ಧರ್ಮದ ತತ್ವ ಚಿಂತನೆಗಳ ಅಧ್ಯಯನಕ್ಕೆ ವಿಶೇಷ ಉತ್ತೇಜನ ನೀಡಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದೆಂದು ಕುಲಪತಿಗಳಾದ ಪ್ರೊ. ರಮೇಶ್.ಬಿ. ತಿಳಿಸಿದ್ದಾರೆ. ಕಲ್ಬುರ್ಗಿಯ ಪಾಲಿ ಇನ್ ಸ್ಟಿಟ್ಯೂಟ್ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಪಾಲಿ–ಕನ್ನಡ ಶಬ್ದಕೋಶ ದ ನಾಲ್ಕನೆಯ ಸಂಪುಟದ ಬಿಡುಗಡೆ ಸಮಾರಂಭದಲ್ಲಿ ಅವರು ಈ ವಿಷಯ ಪ್ರಕಟಿಸಿದರು. ಕ್ರಿ.ಪೂ. ೩ನೇ ಶತಮಾನದ ಕಾಲಘಟ್ಟದಲ್ಲಿ ಜನಬಳಕೆಯ ಭಾಷೆಯಾಗಿದ್ದ ಪಾಲಿ ಭಾಷೆ ಭಾರತೀಯ ಜ್ಞಾನ ಶಾಖೆಯ ಅತ್ಯಮೂಲ್ಯ ಆಗರವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಹೊಸ ಜನಸಂಸ್ಕೃತಿ ಮತ್ತು ನವಭಾರತ ನಿರ್ಮಾಣದ ನಿಟ್ಟಿನಲ್ಲಿ ಗೌತಮ ಬುದ್ಧ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರ ತತ್ವಾದರ್ಶಗಳು ಮಹತ್ವದ ದಾರಿದೀಪಗಳಾಗಿವೆ ಎಂದು ಪ್ರೊ.ರಮೇಶ್ ಪ್ರತಿಪಾದಿಸಿದರು. ನ್ಯಾಕ್ ಸಂಸ್ಥೆಯ ನಿಕಟಪೂರ್ವ ನಿರ್ದೇಶಕರಾದ ಡಾ. ಎಸ್.ಸಿ. ಶರ್ಮಾ ಗ್ರಂಥ ಲೋಕಾರ್ಪಣೆ ಮಾಡಿದರು. ಪುರಾತನ ಶಾಸ್ತ್ರೀಯ ಭಾಷೆಯಾದ ಪಾಲಿ ಭಾರತೀಯ ಸಂಸ್ಕೃತಿಯ ಮೇಲೆ ಅಗಾಧ ಪ್ರಭಾವ ಬೀರಿದೆ ಎಂದು ಅವರು ವಿವರಿಸಿದರು. ಪಾಲಿ ಇನ್ ಸ್ಟಿಟ್ಯೂಟ್ ಗೌರವ ನಿರ್ದೇಶಕರಾದ ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ್ ಕನ್ನಡವವೂ ಸೇರಿದಂತೆ ದ್ರಾವಿಡ ಭಾಷೆಗಳ ಜೊತೆ ಪಾಲಿ ಭಾಷೆ ಹೊಕ್ಕುಬಳಕೆಯ ಕುರಿತು ವಿವರಿಸಿದರು. ಜ್ಞಾನವೆಂಬುದು ಬರೀ ಇಡಿಯಾಗಲಿ, ಬಿಡಿಯಾದುದಾಗಲಿ ಅಲ್ಲ, ಅದರಲ್ಲಿ ಲೌಕಿಕ ಹಾಗೂ ಅಲೌಕಿಕ ಜ್ಞಾನವಿದೆ. ಜ್ಞಾನ ಬರೀ ಪದವಿಗಲ್ಲ, ಪುಸ್ತಕ ಬಿಡುಗಡೆಯ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಬಂದರೆ ಅದರಿಂದ ಕಾರ್ಯಕ್ರಮವು ಸಾರ್ಥಕವಾಗುತ್ತದೆ ಎಂದರು. ಶಬ್ದಕೋಶ ೪೦ ಸಂಪುಟಗಳಿಗೆ ತಲುಪಬೇಕೆಂದು ತಿಳಿಸಿದರು.




ಕಲ್ಬುರ್ಗಿಯ ಪಾಲಿ ಇನ್ಸಸ್ಟಿಟ್ಯೂಟ್ ಮತ್ತು ಬಿಸಿಯು ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ಪದಕೋಶ ಬಿಡುಗಡೆ.

ಕನ್ನಡ–ಪಾಲಿ–ಇಂಗ್ಲೀಷ್ ಭಾಷಾ ವಿದ್ವಾಂಸರಾದ ಡಾ.ಸಿ.ಚಂದ್ರಮೋಹನ್ ಗ್ರಂಥದ ಮಹತ್ವದ ಕುರಿತು ವಿಶ್ಲೇಷಿಸಿದರು. ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ವೈ.ಎಸ್.ಸಿದ್ದೇಗೌಡರು ಮೌಲ್ಯಯುತ ಜೀವನದ ಮೂಲಾಧಾರವಾದ ಸಾಹಿತ್ಯದ ಪೋಷಣೆಗೆ ನಿಘಂಟುಗಳು ಪ್ರಮುಖ ಪಾತ್ರ ವಹಿಸುತ್ತವೆಂದು ವಿವರಿಸಿದರು. ಪಾಲಿ ಇನ್ ಸ್ಟಿಟ್ಯೂಟ್ ಅಧ್ಯಕ್ಷರಾದ ರಾಹುಲ್ ಎಂ.ಖರ್ಗೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕುಲಸಚಿವರಾದ ನವೀನ್ ಜೋಸೆಫ್, ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ.ಕೆ.ಆರ್. ಜಲಜಾ, ಡಾ.ಎಂ.ವಿ.ಕಟ್ಟಿ ಉಪಸ್ಥಿತರಿದ್ದರು. ಡಾ.ಎಸ್. ಎಂ.ಗೋಪಿ ಕಾರ್ಯಕ್ರಮ ನಿರೂಪಿಸಿದರು. ಡಾ ಸಿ.ಎನ್. ಮಂಜು ಬುದ್ಧ ಗೀತೆ ಹಾಡಿದರು.

‘ಅನಿಕೇತನ’ ಮಾಸಿಕ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರ ನಿರ್ದೇಶನದ ಮೇರೆಗೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಉಸ್ತುವಾರಿಯಲ್ಲಿ ‘ಅನಿಕೇತನ’ ಮಾಸ ಪತ್ರಿಕೆಯನ್ನು ಆರಂಭಿಸಲಾಗಿದೆ. ಜ್ಞಾನ ಜ್ಯೋತಿ–ಸೆಂಟ್ರಲ್ ಕಾಲೇಜ್ ಕ್ಯಾಂಪಸ್‌ನ ಎಲ್ಲ ವಿಭಾಗಗಳ ಕಾರ್ಯ ಚಟುವಟಿಕೆಗಳ ವರದಿಗಳನ್ನು ಪ್ರಕಟಿಸುವ ಜೊತೆಗೆ ವಿಶ್ವವಿದ್ಯಾಲಯದ ಪ್ರಗತಿಯ ಬಗ್ಗೆ ಸಮಗ್ರ ಮಾಹಿತಿ ಒದಗಿಸುವ ಉದ್ದೇಶವನ್ನು ಹೊಂದಲಾಗಿದೆ. ಮಾಸಪತ್ರಿಕೆ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳನ್ನು ಒಳಗೊಂಡಿರುತ್ತದೆ ಮಾಸ ಪತ್ರಿಕೆಗೆ ಉಪನ್ಯಾಸಕರು, ವಿದ್ಯಾರ್ಥಿಗಳು ಕವನ, ಲೇಖನ, ಸಂದರ್ಶನ, ಕಲೆ, ಸಾಹಿತ್ಯ, ನುಡಿಚಿತ್ರ, ಕ್ರೀಡೆ, ಸಂಸ್ಕೃತಿಯ ಕುರಿತಾದ ಬರಹಗಳನ್ನು ಕೆಳಕಂಡ ಇ–ಮೇಲ್ ವಿಳಾಸಕ್ಕೆ ಕಳುಹಿಸಬಹುದು. ಪತ್ರಿಕೆಯನ್ನು ಸಂಯೋಜಿತ ಕಾಲೇಜುಗಳಿಗೂ ವಿಸ್ತರಿಸಲಾಗುವುದು. ನಿಮ್ಮ ಸಲಹೆ ಸೂಚನೆಗಳಿಗೆ ಸ್ವಾಗತವಿದೆ. ಪತ್ರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸಲು ನೀವೂ ನಮ್ಮೊಂದಿಗೆ ಕೈಜೋಡಿಸಿ.

**ಇ–ಮೇಲ್ ವಿಳಾಸ:**
**aniketana@bcu.ac.in**

**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ,**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ,**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ,**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಪ್. ಎ,**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಮಾನ್ಯ ಕುಲಸಚಿವರು – ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ ,**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಜ್ಯೋತಿ ವೆಂಕಟೇಶ್,**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ,**
ಡೀನರು, ವಿಜ್ಞಾನ ನಿಕಾಯ.
**ಪ್ರೊ. ಕೆ.ಆರ್.ಜಲಜ,**
ಡೀನರು, ವಾಣಿಜ್ಯ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

**ಬಾಲು ಎನ್,** ಎಂಸಿಜೆ, ದ್ವಿತೀಯ
**ಭಾವನ ಎಂ.ವಿ,** ಎಂಸಿಜೆ, ದ್ವಿತೀಯ
**ಸ್ವಾತಿ ಜಿ,** ಎಂಸಿಜೆ, ಪ್ರಥಮ

## CARING FOR AGING PARENTS

In between love and family,
A topic close to heart, it seems to be.
For parents who have aged with grace,
Their children's actions leave a trace.

Oh, society how you have changed,
With priorities rearranged.
Once revered the elderly now roam,
Seeking solace in a foreign home.

But pause and ponder dear one do,
The sacrifices they made for you.
Through sleepless nights and weary days,
They nurtured you in countless ways.

Their love unfailing a guiding light,
Through darkest hours and toughest fights.
Their dreams once vibrant now suppressed,
As time leaves wrinkles on their crest.

Education yes it's of great worth,
A tool that expands our earthly berth.
But knowledge without compassion's touch,
Is an incomplete education, as such.

True wisdom lies in filial care,
In honoring those who raised us fair.
Degrees and accolades may shine,
But true greatness is in hearts aligned.

So let not your parents be forgotten,
In an old age home left forsaken.
Embrace them with love, tender and true,
For their sacrifices, dear one, were for you.

In this journey of life let's remember well,
The love of parents a story to tell.
For true education blooms within,
When we cherish the ones who raised us kin.

**-Swathi B,2nd year,MA English**

## ಕರುನಾಡು

ಕರುನಾಡು, ಕಪ್ಪು ಮಣ್ಣಿನ ಬೀಡು
ಕನ್ನಡಿಗರ ಕಲಿ ಸೀಮೆಯೇ ಕಮ್ಮಿತ್ತು ನಾಡು
ನಾಭಿಮೂಲದಿ ಜನಿಸಿ ಕೊರಳ ದನಿಯಲಿ ಉದಿಸಿ
ಕರುಳ ನುಡಿಯಾದುದೀ ಕಂನುಡಿಯ ಸೊಗಡು

ಅವಯವಗಳು ಸಮಶ್ರುತಿಯೊಳು
ಅವತರಿಪ ಅರಿವ ಕಿಡಿ, ಮಧುರ ಕನ್ನಡ ನುಡಿ
ಭವ್ಯತೆಗಳ ಆಗರವೀ ಭವ್ಯ ಕನ್ನಡ
ವನಸಿರಿ ತರುಲತೆಗಳ ಗಮ್ಯ ಕನ್ನಡ

ಶಿಲ್ಪಕಲೆ, ನಾಟ್ಯಸೆಲೆ ಸಂಗೀತದ ಪ್ರೌಢಿಮೆ
ಸಾಮರಸ್ಯ ಸಹೃದಯತೆ ಗೆಳೆತನದ ಗರಿಮೆ
ಮುಡಿವೆತ್ತ ಮೈ ಶಿಖರಗಳ ಗಿರಿಪಂಕ್ತಿ ಸಾಲು
ಪ್ರಕೃತಿಯೇ ಧ್ಯಾನಸ್ಥ ರಮಣೀಯ ಕಾಡು.

ಶ್ರೀವಿಜಯ ನೃಪತುಂಗರ ಆಶ್ರಯದಿ
ಬೆಳಗಿದಂತಹ ಚಿರನುಡಿಯೇ
ನಾಡವರ, ಕವಿವರರ ಕಾವ್ಯದಲಿ
ಒಡಮೂಡಿದ ಸೌಗಂಧದ ಸುರಭಿಯೇ..

ಸಜ್ಜನರನು ಸತ್ಕರಿಸುವ ಸೀಮೆವೆತ್ತ ನಾಡೆ
ಸರ್ವಧರ್ಮ ಸಮನ್ವಯಿತ ಆದರ್ಶದ ಬೀಡೆ
ಪಂಪ ರನ್ನ, ಜನ್ನ ಪೊನ್ನ, ಹರಿಹರ ರಾಘವಾಂಕ
ನಿನ್ನ ಕೀರ್ತಿಯ ಪಸರಿಸಿದರು
ಅಜರಾಮರಗೊಳಿಸುತ..

**–ಡಾ.ಗೋಪಿ ಎಸ್.ಎಂ, ಉಪನ್ಯಾಸಕರು, ಕನ್ನಡ ವಿಭಾಗ,**

## ತಿಂಗಳ ಬುತ್ತಿ

**ನವೆಂಬರ್ ೧ – ಕರ್ನಾಟಕ ರಾಜ್ಯೋತ್ಸವ**
**ನವೆಂಬರ್ ೨೬– ಸಂವಿಧಾನ ದಿನಾಚರಣೆ**
**ನವೆಂಬರ್ ೨೭–೨೮ – ಭಾಷೆ, ಸಂಸ್ಕೃತಿ, ವಿಶ್ವಶಾಂತಿ ಅಂತರರಾಷ್ಟ್ರೀಯ ಸಮ್ಮೇಳನ(CGL-BCU)**
**ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಶತಮಾನೋತ್ಸವ ಆಚರಣೆ**

# 2025ರ ನೊಬೆಲ್ ಪ್ರಶಸ್ತಿ ಪುರಸ್ಕೃತರು



ಮಾರಿಯಾ ಕೊರಿನೊ ಮಚಾಡೊ

**ಶಾಂತಿ ಪ್ರಶಸ್ತಿ:** 2025ನೇ ಸಾಲಿನ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ವೆನಿಜುಲಾದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣೆಗಾಗಿ ಅವಿರತವಾಗಿ ಪರಿಶ್ರಮಿಸಿದ ಮಾರಿಯಾ ಕೊರಿನೊ ಮಚಾಡೊ ಅವರಿಗೆ ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ. ಜೀವ ಬೆದರಿಕೆಗೂ ಜಗ್ಗದೆ ಸರ್ವಾಧಿಕಾರದ ದಬ್ಬಾಳಿಕೆಯನ್ನು ಅಂತ್ಯಗೊಳಿಸಿ ಶಾಂತಿಯುತ ಚಳವಳಿಯ ಮಾರ್ಗದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಾಪನೆಗಾಗಿ ಸಲ್ಲಿಸಿದ ಮಹೋನ್ನತ ಕೊಡುಗೆಗಾಗಿ ಈ ಜಾಗತಿಕ ಮನ್ನಣೆ ಲಭಿಸಿಸಿದೆ.

**ಸಾಹಿತ್ಯ ಪ್ರಶಸ್ತಿ:**
ಹಂಗೇರಿಯ ಲೇಖಕ ಲಾಸ್ಲೊ



ಲಾಸ್ಲೊ ಕ್ರಾಸ್ನಾಹೊರ್ಕಾಯೆ

ಕ್ರಾಸ್ನಾಹೊರ್ಕಾಯೆ ಅವರಿಗೆ ಸಾಹಿತ್ಯ ನೊಬೆಲ್ ಪುರಸ್ಕಾರ ಲಭಿಸಿದೆ. ವಿನಾಶಕಾರಿ ಭಯೋತ್ಪಾದನೆಯ ಅಟ್ಟಹಾಸದ ನಡುವೆ ಕಲೆಯ ಶಕ್ತಿಯನ್ನು ಪ್ರಬಲವಾಗಿ ಪುನರ್‌ಪ್ರತಿಪಾದಿಸಿ ಸಮಕಾಲೀನ ಜೀವನಸಾರವನ್ನು ಜಗತ್ತಿಗೆ ಸಾರಿದ ಸಮಗ್ರ ಸಾಹಿತ್ಯ ಸೇವೆಗಾಗಿ ಈ ಗೌರವ ಸಂದಿದೆ.

**ಭೌತಶಾಸ್ತ್ರ ಪ್ರಶಸ್ತಿ:** ‘ಕ್ವಾಂಟಮ್ ಮೆಕ್ಯಾನಿಕಲ್ ಟನಲಿಂಗ್’ ಸಂಬಂಧಿತ ಮಹತ್ವದ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ಬಾರಿಯ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬ್ರಿಟನ್‌ನ ಜಾನ್ ಕ್ಲಾರ್ಕ್, ಫ್ರಾನ್ಸ್‌ನ ಮೈಕೆಲ್ ಎಚ್. ಡೆವೊರೆಟ್ ಮತ್ತು ಅಮೆರಿಕದ ಜಾನ್ ಎಂ.

**ರಸಾಯನಶಾಸ್ತ್ರ ಪ್ರಶಸ್ತಿ:** ಜಪಾನ್‌ನ ಸುಸುಮು ಕಿಟಾಗವಾ, ಬ್ರಿಟನ್‌ನ ರಿಚರ್ಡ್ ರಾಬ್ಸನ್ ಮತ್ತು ಜೋರ್ಡಾನ್‌ನ ಒಮರ್ ಎಂ. ಯಾಘಿ ಈ ಬಾರಿಯ ರಸಾಯನ ವಿಜ್ಞಾನ ನೊಬೆಲ್ ಪ್ರಶಸ್ತಿಯನ್ನು ಹಂಚಿಕೊಂಡಿರುವರು.

“ಲೋಹ ಸಾವಯವ ಚೌಕಟ್ಟು’ ಅಭಿವೃದ್ಧಿಯಲ್ಲಿನ ಸಂಶೋಧನೆಗಾಗಿ ಈ ಮೂವರು ವಿಜ್ಞಾನಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ವೈದ್ಯಕೀಯ ವಿಜ್ಞಾನ ಪ್ರಶಸ್ತಿ:** ರೋಗನಿರೋಧಕ ಶಕ್ತಿಯ ಹೆಚ್ಚಳಕ್ಕೆ ಸಂಬಂಧಿಸಿದ ಮಹತ್ವದ ಸಂಶೋಧನೆಗಾಗಿ ಅಮೆರಿಕದ ಮೇರಿ ಇ. ಬ್ರಂಕೊ, ಫ್ರೆಡ್ ರಾಮ್ಸ್‌ಡೆಲ್ ಮತ್ತು ಜಪಾನ್‌ನ ಶಿಮೋನ್ ಸಕಾಗುಚಿ ಅವರಿಗೆ ಈ ಬಾರಿಯ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿದೆ.

**ಅರ್ಥಶಾಸ್ತ್ರ ಪ್ರಶಸ್ತಿ:** ಆವಿಷ್ಕಾರ ಪ್ರೇರಿತ ಆರ್ಥಿಕ ಪ್ರಗತಿಯ ಕುರಿತ ವಿವರಣೆಗಾಗಿ ಅಮೆರಿಕದ ಜೋಯಲ್ ಮೊಕಿರ್ ಮತ್ತು ಪೀಟರ್ ಹೋವಿಟ್ ಹಾಗೂ ಫ್ರಾನ್ಸ್‌ನ ಫಿಲಿಪ್ ಅಘಿಯಾನ.

### ನೊಬೆಲ್ ಪ್ರಶಸ್ತಿ ಹಿನ್ನೆಲೆ:

ಸ್ವೀಡನ್ ದೇಶದ ಪ್ರಖ್ಯಾತ ರಸಾಯನಶಾಸ್ತ್ರ ವಿಜ್ಞಾನಿ ಮತ್ತು ಉದ್ಯಮಿ ಆಲ್ಫ್ರೆಡ್ ಬರ್ನಾರ್ಡ್ ನೊಬೆಲ್ (ಕ್ರಿ.ಶ. ೧೮೩೩–೧೮೯೬) ಡೈನಾಮೈಟ್ ಅನ್ವೇಷಣೆಯ ಮೂಲಕ ವಿಶ್ವದ ಗಮನ ಸೆಳೆದರು. ಗಣಿಗಾರಿಕೆ ಮತ್ತು ಕಟ್ಟಡ ನಿರ್ಮಾಣ ಕ್ಷೇತ್ರಗಳಿಗೆ ವರದಾನವಾಗಿ ಪರಿಣಮಿಸಿದ ಈ ಸಾಧನೆ ವಿನಾಶಕಾರಿ ಮಾರಕಾಸ್ತ್ರಗಳ ಉತ್ಪಾದನೆಗೂ ಬಳಕೆಯಾಗಿ ಆಲ್ಫ್ರೆಡ್ ನೊಬೆಲ್ ‘ಸಾವಿನ ವ್ಯಾಪಾರಿ’ ಎಂಬ ಪ್ರಬಲ ಟೀಕೆಗೂ ಗುರಿಯಾದರು. ಇದರಿಂದ ಮನನೊಂದ ಅವರು ತಮ್ಮ ಸಂಪತ್ತಿನ ಗಣನೀಯ ಭಾಗವನ್ನು “ಮಾನವಕುಲದ ಪ್ರಗತಿಗೆ ಮಹೋನ್ನತ ಕೊಡುಗೆ ನೀಡಿದ” ಸಾಧಕರಿಗೆ ಪ್ರಶಸ್ತಿಗಳನ್ನು ನೀಡುವ ಉಯಿಲನ್ನು ಬರೆದಿಟ್ಟರು. ೧೯೦೧ ರಲ್ಲಿ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಯನ್ನು ಪ್ರಾರಂಭಿಸಲಾಯಿತು. ೧೯೬೮ ರಿಂದ ಅರ್ಥಶಾಸ್ತ್ರಕ್ಕೂ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**Printed and Published by The Registrar, Bengaluru City University, Jnanajyothi Central College Campus, Dr. B. R. Ambedkar Veedhi, Bengaluru - 560001**